‘ಬಾ ಪುಟ್ಟ ಬಂಗಾರ. ಒಮ್ಮೆ ನಿನ್ನ ಮುದ್ದು ಮುಖ ತೋರಿಸಿಬಿಡು. ನನ್ನ ಪುಟ್ಟಮರಿ ಹಾಗಿರುವ ಮಗು ಮೂರುಲೋಕದಲ್ಲಿ ಕೂಡಾ ಸಿಗದು. ನೋಡಿ ಮಹಾರಾಜ, ಈ ಮಗು ಜನಿಸಿದಾಗ ಆ ತನಕ ಬಾರದ ಮಳೆ ಅಂದು ಬಂದಿತು. ಎಲ್ಲರೂ ಹೇಳಿದ್ದು ಒಂದೇ. ನನ್ನ ಮಗ ಇದ್ದ ಕಡೆ ಸುಭಿಕ್ಷೆ ಅಂತಲೇ. ಸಕಲ ಶುಭಲಕ್ಷಣದ ದೇವತೆ’ ಅಪ್ಪಿ ಮುದ್ದಾಡಿದಳಾ ತಾಯಿ ಮಗದೊಮ್ಮೆ. ಮಹಾರಾಣಿಯ ಮೊಗದ ತುಂಬಾ ಹೇವರಿಕೆ! ಪ್ರಧಾನಿ ತುಟಿ ಬಿಚ್ಚಲಿಲ್ಲ.

ಆಗ ರಾಜಕುಮಾರನನ್ನು ಸೇವಕಿ ಎತ್ತಿ ತಂದು ಅರಸನ ಮಡಿಲಿನಲ್ಲಿ ಕೂರಿಸಿದಳು. ಆಗ ಒಳಬಂದಳು ಮಗದೊಬ್ಬ ತಾಯಿ. ಕೈಲಿ ಎಲುಬಿನ ಗೂಡಿನ ಹಾಗಿದ್ದ ಮಗು.

‘ನನ್ನ ಗಂಡ ಅರೆಘಳಿಗೆ ಈ ಮಗಳನ್ನು ಬಿಟ್ಟಿರಲಾರ ಪ್ರಭೂ. ಬೆಳಿಗ್ಗೆ ಇವಳ ಮುಖ ದರ್ಶನ ಮಾಡಿ  ಮೀನು ಹಿಡಿಯಲು ಹೋದಾಗ ಬಲೆ ತುಂಬಿ ಬಿರಿಯುವ ಹಾಗೆ ಮೀನು. ಅತ್ತರೆ ನನ್ನ ಬೈತಾನೆ. ರಾತ್ರೆ ಇದು ಮಲಗದೆ ಇದ್ದರೆ ಇಡಿಯ ರಾತ್ರಿ ಅವನೂ ಎದ್ದೇ ಇರುವಾತ. ಪ್ರೀತಿಯ ಮುದ್ದೆ ನನ್ಮಗಳು’ ಎಂದಾಕೆಯ ಕಣ್ಣು ರಾಜಕುಮಾರನ ಮೇಲೆ ಬಿತ್ತು

‘ಮಹಾರಾಜರು ಅದಾವ ಕಪ್ಪೆಮರಿಯಂತಹ ಶಿಶುವನ್ನು ಮಡಿಲಿನಲ್ಲಿ ಕೂರಿಸಿಕೊಂಡಿದ್ದು? ಬಿಳಿಚಿದ ಸುಣ್ಣದ ಹಾಗಿದೆ ಮಗು! ಬಾಯಿ ಅಂದರೆ ಕಪ್ಪೇದು. ಅಸಹ್ಯದ ಮಗು. ಅತ್ತ ಎಸೀರಿ ಸೇವಕಿಯ ಕೈಗೆ. ಇಗೋ, ಈ ಬಂಗಾರಿಯನ್ನು ಕೂರಿಸಿಕೊಳ್ಳಿ. ಏನಂದುಕೊಂಡಿದ್ದು ತಾವು, ಅದೃಷ್ಟದ ಮಗುವನ್ನು ಅರೆಘಳಿಗೆ ಎತ್ತಿಕೊಂಡರೆ  ಅದು ಸೌಭಾಗ್ಯ. ಆದರೆ ಅಳಿಸಕೂಡದು. ನನ್ನ ಗೊಂಬೆ ನಕ್ಕರೆ ಅದೇ ಬೆಳದಿಂಗಳು’ ಅವಳ ಮಾತು ಮುಗಿಯುವ ಲಕ್ಷಣ ಕಾಣದಾಗ ಮಂತ್ರಿ ಅವಳನ್ನು ಅತ್ತ ಕಳಿಸಿದ್ದಾಯ್ತು.

ಮತ್ತೊಬ್ಬ ತಾಯಿ ‘ಸಕ್ಕರೆಗೊಂಬೆ ಹಾಗೆ ನನ್ನ ಮಗಳು. ಇಂತ ಕಂದ ಹಿಂದೆ ಹುಟ್ಟಿಲ್ಲ; ಮುಂದೆ ಹುಟ್ಟಲಾರದು. ಯಾವ ರಾಜಕುಮಾರ ಸಾಟಿ ಇವಳಿಗೆ. ಇವಳು ರಾಜಕುಮಾರಿ ಯೋಗದ ಕಂದ .ಅದಾರು ನಿಮ್ಮ ಮಡಿಲಿನಲ್ಲಿ. ಪೆದ್ದುಪೆದ್ದಾಗಿ ಇತ್ತ ನೋಡ್ತಿರೊ ಗಡವ. ಕಳ್ಳ ಬೆಕ್ಕಿನ ಲಕ್ಷಣದ ಮಗು. ಹೆಚ್ಚು ಹೊತ್ತು ನಿಂತರೆ ಅದರ ದೃಷ್ಟಿ ಇವಳಿಗೆ ತಗುಲೀತು, ನಾ ಹೊರಟೆ, ಹೋಗೋಣ ಮುದ್ದು’ ಎಂದು ಮಗುವನ್ನು ಅಪ್ಪಿ ಸಾಗಿದಳಾ ತಾಯಿ.

ಬಂದ ಎಲ್ಲ ತಾಯಂದಿರೂ ತಮ್ಮ ಕಂದನ ಸಮಾನ ಮೂರುಲೋಕದಲ್ಲಿ ಇಲ್ಲವೆಂದು ಖಡಾಖಂಡಿತವಾಗಿ ನುಡಿದರು. ಮಹಾರಾಣಿ ಬೆಪ್ಪಾಗಿದ್ದಳು. ಮಹಾರಾಜನು  ಪೆಚ್ಚಾಗಿ ಹೋದನು. ಅದೆಂಥಾ ತಾಯಿ. ಅರಸು ಕುಮಾರನನ್ನು ಹೀಯಾಳಿಸಿದವಳು! ಕಪ್ಪೆಕುಮಾರನ ಹಾಗಿದ್ದಾನಾ ಈ ಮಗು? ಊಹೂಂ. ಇಲ್ಲವಲ್ಲ. ಮತ್ತೇಕೆ ಅವರ ದೃಷ್ಟಿ ಹಾಗೆ?

ಮಹಾರಾಣಿಗೆ ತನ್ನ ಮಗನನ್ನು ಲೇವಡಿ ಮಾಡಿದ್ದು ಕೇಳಿ ಅಪಾರ ಸಿಟ್ಟು ಉಕ್ಕಿ ಬಂದಿತ್ತು. ಒಬ್ಬಳೇ ಒಬ್ಬಳು ಅಮ್ಮನೂ ರಾಜಕುಮಾರ ಅತ್ಯಂತ ಚೆಲುವಾದ ಬಾಲಕ ಎಂದು ಹೇಳಿಯೇ ಇಲ್ಲ. ತಮ್ಮ ಮಕ್ಕಳೇ ಸೊಬಗಿನ ಬೆಣ್ಣೆ ಮುದ್ದೆಗಳು ಎಂದು ಮುದ್ದಿಸಿದ್ದರು. ಪ್ರತಿ ತಾಯಿಗೆ ಜಗತ್ತಿನಲ್ಲಿ ತನ್ನ ಕಂದನೇ  ಅತ್ಯಂತ ಚೆಲುವು ತುಂಬಿದ ಮಗು ಎಂದು ಮಹಾರಾಜ ಮತ್ತು ಮಹಾರಾಣಿಗೆ ಅರ್ಥವಾಯಿತು.  ಪ್ರತಿಯೊಬ್ಬ ತಾಯಿಯನ್ನು ಕರೆದು ಅಂತಹ ಸುಂದರ ಮಗುವನ್ನು ಪಡೆದ ಸೌಭಾಗ್ಯಕ್ಕೆ ಮಕ್ಕಳ ಬೊಗಸೆ ತುಂಬ ಬಂಗಾರದ ನಾಣ್ಯ ತುಂಬಿದಳು.

‘ಪ್ರಧಾನಿಗಳೆ,  ನಮ್ಮ ಕಣ್ತೆರೆಸಿದಿರಿ. ನಿಜ ಅರ್ಥವಾಯಿತು. ನದಿಯನ್ನು ತಿರುಗಿಸಿ  ರಾಜ್ಯದ ಜನತೆಗೆ ನೀರು ಒದಗಿಸುವ ಕಾರ್ಯಕ್ಕೆ ಸೈನಿಕರನ್ನು ಹೊರಡಿಸಿ. ನಾವೂ ಅಲ್ಲಿರಬೇಕು. ಪ್ರತಿ ಪ್ರಜೆಗೆ ನೀರು ಲಭ್ಯವಾಗಬೇಕು’ ಎಂದ ಮಹಾರಾಜ. ಪ್ರಧಾನಿ ಸಂತೋಷದಿಂದ ಎದ್ದು ಹೊರಟನು.

**– ಕೃಷ್ಣವೇಣಿ ಕಿದೂರ್, ಕುಂಬಳೆ**



# ಕೊಳಲನೂದುವ ಚಲುವ ಚೆನ್ನಿಗ

**ದೂ**ರದಿಂದ ಬಂದನೊಬ್ಬ
ಚಲುವ ಚೆನ್ನಿಗ
ದೊಡ್ಡ ದೇಹ ಗಿಡ್ಡ ಕಾಲು
ಪಡೆದ ಪಯಣಿಗ

ಅವನ ಬಳಿಯಲೊಂದು ಸಣ್ಣ
ಕೊಳಲು ಇದ್ದಿತು
ಮುರಳಿಯಂತೆ ಭಂಗಿ ತೋರಿ
ಊದುತ್ತಿದ್ದನು

ಮಧುರವಾದ ಕೊಳಲ ನಾದ
ಕೇಳಿ ಮಕ್ಕಳು
ಮಂತ್ರ ಮುಗ್ಧರಾಗಿ ಅವನ
ಬೆನ್ನು ಬಿದ್ದರು

ಅವರಿಗೆಲ್ಲ ಉಣಿಸಿ ತಿನಿಸಿ
ನಲಿಸುತ್ತಿದ್ದನು
ಅವರಿಗಿಷ್ಟವಾದ ಹಾಡು
ನುಡಿಸುತ್ತಿದ್ದನು

ಮಕ್ಕಳವನ ಬಹಳವಾಗಿ
ಹಚ್ಚಿಕೊಂಡರು
ಅವನ ಬಿಟ್ಟು ಕ್ಷಣವು ಇರದ
ಹಾಗೆ ಆದರು

ಹಗಲು ರಾತ್ರಿ ಅವನ ಹಿಂದೆ
ಊರ ಪೋರರು
ಅಲೆಯುತಿರಲು ಹಳ್ಳಿ ಜನತೆ
ನಲುಗಿ ಹೋದರು

ಒಂದು ರಾತ್ರಿ ಚಲುವನಲ್ಲಿ
ಊರ ಹಿರಿಯರು
ಕೈಯ ಮುಗಿದು ವಿನಯದಿಂದ
ಬೇಡಿಕೊಂಡರು

ನಮ್ಮ ಊರ ಮಕ್ಕಳೆಲ್ಲ
ವಿದ್ಯಾವಂತರು
ಆಗಬೇಕು ಅದಕೆ ಕಳಿಸು
ಬಿಟ್ಟು ಅವರನು

ಅವರ ಮಾತು ಕೇಳಿ ಚಲುವ
ಮೌನವಾದನು
ರಾತ್ರಿ ಕಳೆದು ಬೆಳಗು ಆಗೆ
ಮಾಯವಾದನು

ನಿದ್ರೆಯಿಂದ ಎಚ್ಚರಾಗಿ
ಮಕ್ಕಳೆಲ್ಲರು
ಚಲುವ ಅಲ್ಲಿ ಕಾಣದಿರಲು
ದುಃಖಿಗೊಂಡರು

ಅವನ ಕೊಳಲು ಅಲ್ಲೆ ಇತ್ತು
ಅದನು ಒಯ್ಯಲು
ಬಂದೇ ಬರುವನೆಂದು ದಿನವೂ
ಕಾಯುತಿರುವರು.

**–ಸೋಮಲಿಂಗ ಬೇಡರ,**
**ಆಳೂರ**